ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ**08.02.2023**

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಕೆ ಎನ್ ವಕೀಲರಿಂದ

2009 ನೇ ಇಸವಿಯ ಟ್ರಸ್ಟ್ ಡೀಡ್ ನಲ್ಲಿ ಹೊಸಬರು ಸೇರ್ಪಡೆಯಾಗಿದ್ದು, ಅವರ ಹೆಸರುಗಳು ನನಗೆ ನೆನಪಿಲ್ಲ. ನಾವು ಟ್ರಸ್ಟ್ ನಲ್ಲಿ ಆಗುವ ಸಭೆಗಳಿಗೆ ಪ್ರತ್ಯೇಕ ನಡವಳಿ ಮಾಡುತ್ತೇವೆ ಹಾಗೂ ಲಯನ್ಸ್ ಕ್ಲಬ್ ನಲ್ಲಿ ಆಗುವ ಸಭೆಗಳಿಗೆ ಪ್ರತ್ಯೇಕ ನಡವಳಿ ಮಾಡುತ್ತೇವೆ ಎಂದರೆ ಸರಿ. ಟ್ರಸ್ಟ್ ಡೀಡ್ ನಲ್ಲಿ ಇರುವಂತಹ ಸದಸ್ಯರು ಮಾತ್ರ ಸಭೆಗೆ ಭಾಗವಹಿಸಲು ಅರ್ಹರು ಎಂದರೆ ಸರಿ. 2009 ರ ಟ್ರಸ್ಟ್ ಡೀಡ್ ನಲ್ಲಿ ನಿಪಿ-1 ರಲ್ಲಿ ಕಾಣಿಸುವ ನನ್ನನ್ನು ಹೊರತುಪಡಿಸಿ ಉಳಿದವರು ಯಾರು ಟ್ರಸ್ಟಿ ಗಳು ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಆ ನಂತರದಲ್ಲಿ ನಡವಳಿಯ ಮುಖಾಂತರ ಅವರುಗಳನ್ನು ಟ್ರಸ್ಟಿ ಗಳಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಯಾವುದೆ ಆ ರೀತಿಯ ನಡವಳಿ ಆಗಿಲ್ಲ ಎಂದರೆ ಸರಿಯಲ್ಲ, ಅದಕ್ಕೆ ಪೂರಕವಾದ ಅನುಬಂಧ ಪತ್ರವನ್ನು ಮಾಡಿಕೊಂಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕಾಣಿಸುವ ನಾವೆಲ್ಲಾ ಒಂದು ಗುಂಪು ರಚನೆ ಮಾಡಿಕೊಂಡು ನಿಪಿ-1 ನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಾವಾಸ್ವತ್ತು ಕ್ರಯ ಸಾಧನವಾದ ಬಗ್ಗೆ 1998 ರಲ್ಲಿ ನಾನು ಸಂಸ್ಥೆಗೆ ಸೇರಿದಾಗ ನನ್ನ ಗಮನಕ್ಕೆ ಬಂದಿರುತ್ತದೆ. ನಿಪಿ-5 ರ ಪ್ರಕಾರ ದಿಃ 24.06.1993 ರಿಂದ ದಿಃ 23.06.1996 ರ ಒಳಗೆ ಕಣ್ಣಿನ ಆಸ್ಪತ್ರೆ ತೆಗೆಯಬೇಕೆಂದು ಷರತ್ತು ಬದ್ಧ ಕ್ರಯವಾಗಿದೆ ಎಂದರೆ ಸರಿ. ಒಂದು ವೇಳೆ ದಿಃ 23.06.1996 ರ ನಂತರ ಆಸ್ಪತ್ರೆ ಕಟ್ಟದೇ ಇದ್ದಲ್ಲಿ ಕ್ರಯದ ಮೊತ್ತವಾದ ರೂ15,000/- ಗಳನ್ನು ಬಡ್ಡಿ ಇಲ್ಲದೆ ನಮ್ಮ ಸಂಸ್ಥೆಗೆ ಮರು ಪಾವತಿ ಮಾಡಬೇಕೆಂದು ಷರತ್ತು ಇದೆ ಎಂದರೆ ನಾನು ಅದನ್ನು ಗಮನಿಸಿರುವುದಿಲ್ಲ. ದಾವಾಸ್ವತ್ತಿಗೆ ನಾನು ನಿರುಪಾಧಿಕ ಒಡೆಯ ಅಲ್ಲ ಎಂದರೆ ಸರಿಯಲ್ಲ. ಸದ್ರಿ ವಿಷಯವನ್ನು ಮರೆ ಮಾಚಿ ಜಿಲ್ಲಾಧಿಕಾರಿಗಳಿಗೆ ಭೂ ಪರಿವರ್ತನೆಗಾಗಿ ಅರ್ಜಿ ಸಲ್ಲಿಸಿರುವ ಕಾರಣ ಅದು ಮಂಜೂರಾಗದೆ ಹಾಗೆ ಉಳಿದಿರುತ್ತದೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ ತಿಳಿಸಿರುವಂತೆ 5 ನೇ ಪ್ರತಿವಾದಿಗೆ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಲು ಅರ್ಜಿ ಸಲ್ಲಿಸಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಲು ಯಾವುದೆ ತೊಂದರೆ ಇಲ್ಲ. ನಿಪಿ-9 ರಲ್ಲಿ ಪರಿವರ್ತನೆಗಾಗಿ ಶುಲ್ಕ ಪಾವತಿಸಿರುವ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ, ಆ ಬಗ್ಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ಕಾರ ಸಾರ್ವಜನಿಕರ ಅನುಕೂಲಕ್ಕಾಗಿ ಯೋಜನೆ ಮಾಡಿದ್ದು, ಅದನ್ನು ಅಡ್ಡಿ ಪಡಿಸುವ ಸಲುವಾಗಿ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 23.06.1996 ರ ನಂತರ ನಾವು ಸರ್ಕಾರದೊಂದಿಗೆ ಕಟ್ಟಡ ಪರವಾನಗಿ ಕೇಳಿ ಮಾಡಿರುವ ಪತ್ರ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೆ ಪತ್ರ ವ್ಯವಹಾರ ಮಾಡಿಲ್ಲ. ನಮ್ಮ ಸಂಸ್ಥೆಯಾಗಲೀ ಅಥವಾ ಸಂಸ್ಥೆಯ ಪೂರ್ವ ನ್ಯಾಶದಾರಿಗಳಾಗಲೀ ದಾವಾಸ್ವತ್ತಿನ ಭೌತಿಕ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನಿಪಿ-5 ರ ಪ್ರಕಾರ ಕ್ರಯದ ಮೊಬಲಗನ್ನು ವಾಪಸ್ಸು ಪಡೆದು ಅಗತ್ಯ ದಾಖಲೆಗಳನ್ನು ಕಾರ್ಯವಾಹಕ್ಕೆ ತರಲು ನಾನು ಬಾಧ್ಯನಾಗಿದ್ದೇನೆ ಎಂದರೆ ಸರಿಯಲ್ಲ. ಟ್ರಸ್ಟಿ ಗೆ ಸಂಬಂಧಪಡದೇ ಇರುವವರನ್ನು ಸೇರಿಸಿಕೊಂಡು ನಾನು ದಾವಾಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೂ ನಮ್ಮ ಸಂಸ್ಥೆಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.